**ದಿಃ 19-01-2026** ರಂದು ಸಾಕ್ಷಿಯನ್ನು **ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ** ವಿ ಬಿ ಎಸ್ **ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿ ಬರೆದ ಎಲ್ಲಾ ವಿಷಯಗಳು ಸರಿಯಾಗಿದ್ದು ಸತ್ಯವಾಗಿರುತ್ತವೆ.

ಪ್ರ.ವ. ವರದಿಯನ್ನು ನಿಪಿ-1, ದೂರಿನ ಪ್ರತಿಯನ್ನು ನಿಪಿ-2, ಗುನ್ಹೆ ಸ್ಥಳದ ಪಂಚನಾಮೆಯನ್ನು ನಿಪಿ-3, ವಾಹನ ತಡೆ ಪಂಚನಾಮೆಯನ್ನು ನಿಪಿ-4, ವಾಹನ ತಪಾಸಣಾ ವರದಿಯನ್ನು ನಿಪಿ-5, ಗಾಯದ ಪ್ರಮಾಣ ಪತ್ರವನ್ನು ನಿಪಿ-6, ದೋಷಾರೋಪಣೆ ಪಟ್ಟಿಯನ್ನು ನಿಪಿ-7 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ**

**(1** ನೇ ಎದುರುದಾರ ಏಕತರ್ಫಿ ಆಗಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು**)**

**ಪಾಟೀ ಸವಾಲುಃ**

**(3** ನೇ ಎದುರುದಾರ ತಕಾರಾರು ಸಲ್ಲಿಸಿರುವುದಿಲ್ಲ ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು**)**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀಮತಿ ಸಿ ಕೆ ವಕೀಲರಿಂದಃ**

ಅಪಘಾತವು ದಿನಾಂಕ 28.08.2024 ರಂದು ಬೆಳಿಗ್ಗೆ 7-45 ಗಂಟೆಗೆ ಆಗಿರುತ್ತದೆ. ಆ ಸಮಯದಲ್ಲಿ ಟಾಟಾಏಸ್ ಗೂಡ್ಸ ವಾಹನದಲ್ಲಿ ಹೋಗುತ್ತಿದ್ದೆವು. ಸದರಿ ವಾಹನ ಗೂಡ್ಸ ವಾಹನ ಆಗಿರುವುದರಿಂದ ಅದರಲ್ಲಿ ಪ್ರಯಾಣಿಸಲು ಬರುವುದಿಲ್ಲ ಅಂದರೆ ನಿಜ. ವಾಹನ ಚಾಲಕ ವಾಹನವನ್ನು ವೇಗವಾಗಿ ಅಡ್ಡಾತಿಡ್ಡಿಯಾಗಿ ಚಲಾಯಿಸಿಕೊಂಡು ಹೋಗಿ ತಡಸ ಕ್ರಾಸ್ ಹತ್ತಿರ ಅಪಘಾತಪಡಿಸಿದ್ದಾನೆ ಅಂದರೆ ನಿಜ. ನಾನು ವಾಹನದ ಹಿಂಬಾಗದ ಮಧ್ಯದಲ್ಲಿ ಕುಳಿತಿದ್ದೆ. ಹಿಂದಿನ ಭಾಗದಲ್ಲಿ ಸುಮಾರು 10-12 ಜನರು ಪ್ರಯಾಣಿಸುತ್ತಿದ್ದರು. ಪ್ರಯಾಣಿಕರು ತುಂಬಿದ್ದರಿಂದ ಮುಂದಿನ ಭಾಗ ಕಾಣಿಸುತ್ತಿರಲಿಲ್ಲ ಅಂದರೆ ಸರಿಯಲ್ಲ. ಹಿಂದಿನ ಭಾಗ ಕಾಣಿಸುತ್ತಿತ್ತು. ಹಿಂಬದಿಯಲ್ಲಿ ಶೀಟುಗಳು ಇರುವುದಿಲ್ಲ. ನಾವು ಪ್ರಯಾಣಿಸುತ್ತಿದ್ದ ವಾಹನ ಚಾಲಕ ಚಾಲನಾ ಪರವಾನಿಗೆ ಹೊಂದಿರಲಿಲ್ಲ ಎನ್ನುವದು ನನಗೆ ಗೊತ್ತಿಲ್ಲ. ಪೋಲೀಸರ ಯಾರ ಮೇಲೆ ದೋಷಾರೋಪಣ ಹಾಕಿದ್ದಾರೆ ಗೊತ್ತಿಲ್ಲ. ನಾವು ಪ್ರಯಾಣಿಸುತ್ತಿದ್ದ ವಾಹನದ ಚಾಲಕನ ವಿರುದ್ಧ 1 ನೇ ಆರೋಪಿ ಎಂದು ಪೋಲೀಸರು ದೋಷಾರೋಪಣೆ ಸಲ್ಲಿಸಿದ್ದಾರೆ ಎನ್ನುವದು ಸರಿಯಲ್ಲ. ನಮ್ಮ ವಾಹನ ನಿಂತಿದ್ದು ಅದಕ್ಕೆ ಎದುರುಬದಿಯ ವಾಹನ ಡಿಕ್ಕಿ ಪಡಿಸಿರುತ್ತದೆ.

ನಾವು ಸಲ್ಲಿಸಿದ ದಾಖಲೆಗಳ ಬಗ್ಗೆ ಕೇಳಿ ತಿಳಿದುಕೊಂಡಿದ್ದೇನೆ. ನಾವು ಹೋಗುತ್ತಿದ್ದ ವಾಹನದ ಹಿಂಬದಿಯಲ್ಲಿ ಒಬ್ಬ ಬೈಕ ಸವಾರ ಬರುತ್ತಿದ್ದ ಎನ್ನುವದು ನನಗೆ ಗೊತ್ತಿಲ್ಲ. ಬೈಕ ಸವಾರನಿಗೆ ಚಾಲನಾ ಪರವಾನಿಗೆ ಇರಲಿಲ್ಲ ಸದರಿಯವರು ನಮ್ಮ ವಾಹನಕ್ಕೆ ಹಿಂಬದಿ ಡಿಕ್ಕಿ ಪಡಿಸಿದ್ದಾನೆ ಎನ್ನುವದು ನನಗೆ ಗೊತ್ತಿಲ್ಲ. ಅಪಘಾತವು ನಾವು ಹೋಗುತ್ತಿದ್ದ ವಾಹನ ಚಾಲಕ ಹಾಗೂ ಬೈಕ ಸವಾರನ ನಿರ್ಲಕ್ಷತನದಿಂದ ಅಪಘಾತವಾಗಿದ್ದು 1ನೇ ಎದುರುದಾರನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಅಂದರೆ ಸರಿಯಲ್ಲ. ಗೂಡ್ಸ ವಾಹನದಲ್ಲಿ ಪ್ರಯಾಣಿಸುತ್ತಿದ್ದೇವೆ ಎಂದು ಹೇಳಿದರೆ ನಮಗೆ ಪರಿಹಾರ ಸಿಗುವುದಿಲ್ಲ ಎಂದು ಲಾರಿ ಚಾಲಕ ಹಿಂದಿನಿಂದ ವೇಗವಾಗಿ ಬಂದು ಡಿಕ್ಕಿ ಪಡಿಸಿದ್ದಾನೆಂದು ಸುಳ್ಳು ಪ್ರಕರಣ ದಾಖಲಿಸಲಾಗಿದೆ ಅಂದರೆ ಸರಿಯಲ್ಲ. ಲಾರಿ ಚಾಲಕ ನಿದಾನವಾಗಿ ಬರುತ್ತಿದ್ದು ಆತನ ಯಾವುದೆ ತಪ್ಪು ಇಲ್ಲದಿದ್ದರೂ ಕೂಡಾ ಆತನನ್ನು ಪ್ರಕರಣದಲ್ಲಿ ಸಿಲುಕಿಸಲಾಗಿದೆ ಅಂದರೆ ಸರಿಯಲ್ಲ. ನಾವು ಹೋಗುತ್ತಿದ್ದ ವಾಹನ ನಿಂತಿದ್ದಾಗ ಹಿಂದಿನಿಂದ ಬಂದ ಲಾರಿ ಚಾಲಕ ನಮ್ಮ ವಾಹನಕ್ಕೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿದ್ದಾನೆಂದು ನನ್ನ ಅರ್ಜಿಯಲ್ಲಿ ಹಾಗೂ ಪೋಲೀಸ ದಾಖಲೆಗಳಲ್ಲಿ ಎಲ್ಲಿಯೂ ನಮೂದಿಸಿಲ್ಲ ಅಂದರೆ ಸರಿಯಲ್ಲ. ಅಪಘಾತವು ಲಾರಿ ಚಾಲಕನ ನಿರ್ಲಕ್ಷತನದಿಂದ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತಕ್ಕೂ ಲಾರಿ ಚಾಲಕನಿಗೂ ಯಾವುದೆ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ಅಪಘಾತದ ಪರಿಹಾರದ ಹಣ ಪಡೆಯುವ ಸಲುವಾಗಿ 1ನೇ ಎದುರುದಾರಾನ ತಪ್ಪಿನಿಂದ ಅಪಘಾತವಾಗಿದೆ ಎಂದು ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ.

ಅಪಘಾತದಲ್ಲಿ ನನಗೆ ಸಣ್ಣಪುಟ್ಟ ಗಾಯಗಳು ಆಗಿದ್ದವು ಅಂದರೆ ಸರಿಯಲ್ಲ. ಅಪಘಾತವಾದ ನಂತರ ನಾನು ಕಲಘಟಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು ನಂತರ ಅದೇ ದಿನ ಹುಬ್ಬಳ್ಳಿ ಕಿಮ್ಸ ಅಸ್ಪತ್ರೆಗೆ ದಾಖಲಿಸಿದ್ದು ಅಲ್ಲಿ 4 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ. ಈ ಬಗ್ಗೆ ದಾಖಲೆ ಹಾಜರ ಪಡಿಸಿದ್ದೇನೆ. ಹೆಚ್ಚಿನ ಉಪಚಾರ ಕುರಿತು ಕಲಘಟಗಿಯಿಂದ ಕಿಮ್ಸ ಆಸ್ಪತ್ರೆಗೆ ಕಳುಹಿಸಿಕೊಟ್ಟ ಬಗ್ಗೆ ದಾಖಲೆ ಹಾಜರ ಪಡಿಸಿಲ್ಲ. ನಾನು ಕಲಘಟಗಿ ಹಾಗೂ ಕಿಮ್ಸ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ ಪಡೆದುಕೊಂಡಿದ್ದೇನೆ. ನನಗೆ ಆದಾ ಗಾಯಗಳು ಸಾದಾಸ್ವರೂಪದ ಗಾಯಗಳಾಗಿದ್ದು ನಾನು ಈಗಲೂ ಕೂಡಾ ಮೊದಲಿನಂತೆ ಕೆಲಸ ಮಾಡುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ಈಗ ಕುಳಿತುಕೊಳ್ಳಲು, ನಡೆದಾಡಲು, ಕೆಲಸ ಮಾಡಲು ಆಗುವುದಿಲ್ಲ ಎನ್ನುವ ಬಗ್ಗೆ ದಾಖಲೆ ಹಾಜರ ಪಡಿಸಿಲ್ಲ ಸರಿಯಲ್ಲ. ನನಗೆ ಅಪಘಾತದಿಂದಾಗಿ ಯಾವುದೆ ರೀತಿಯ ತೊಂದರೆ ಅಗಿಲ್ಲ ಅಂದರೆ ಸರಿಯಲ್ಲ. ಚಿಕಿತ್ಸೆ ಸಲುವಾಗಿ ರೂ 2 ಲಕ್ಷ ಖರ್ಚು ಮಾಡಿದ್ದೇನೆಂದು ತೋರಿಸಲು ದಾಖಲೆ ಹಾಜರ ಪಡಿಸಿಲ್ಲ.

ನಾನು ಗಾರ್ಮೆಂಟನಲ್ಲಿ ಕೆಲಸ ಮಾಡುತ್ತಿದ್ದು ತಿಂಗಳಿಗೆ ರೂ 20 ಸಾವಿರ ಸಂಬಳ ಪಡೆಯುತ್ತಿದ್ದೆ ಎಂದು ದಾಖಲೆ ಹಾಜರ ಪಡಿಸಿಲ್ಲ. ಯಾವುದೆ ಕಂಪನಿಗಳು ತಮ್ಮ ನೌಕರರಿಗೆ ನೇರವಾಗಿ ನಗದು ಸಂಬಳ ನೀಡುವುದಿಲ್ಲ ಬ್ಯಾಂಕ ಖಾತೆಗೆ ಜಮಾ ಮಾಡುತ್ತಾರೆ ಅಂದರೆ ಸರಿಯಲ್ಲ. ನಮಗೆ ಸಂಬಳವನ್ನು ನಗದು ರೂಪದಲ್ಲಿ ನೀಡುತ್ತಾರೆ. ನಾನು ಗಾರ್ಮೆಂಟನಲ್ಲಿ ಕೆಲಸ ಮಾಡುತ್ತಿರಲಿಲ್ಲ ಹಾಗೂ ಯಾವುದೆ ಸಂಬಳ ಬರುತ್ತಿರಲಿಲ್ಲ ಆದ್ದರಿಂದ ಯಾವುದೆ ದಾಖಲೆ ಹಾಜರ ಪಡಿಸಿಲ್ಲ ಅಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 4 ನೇ ಎದುರುದಾರರ ಪರ ಶ್ರೀ ಎಂ ಎಂ ಬಿ ವಕೀಲರಿಂದಃ</u>**

ನಾವು ಹೋಗುತ್ತಿದ್ದ ಟಾಟಾಏಸ್ ವಾಹನದಲ್ಲಿ ಆಸನಗಳ ವ್ಯವಸ್ಥ ಇರಲಿಲ್ಲ ಅಂದರೆ ಸರಿ. ನಾವು ಹೋಗುತ್ತಿದ್ದ ವಾಹನ ಗೂಡ್ಸ ವಾಹನ. ಅಪಘಾತ ಲಾರಿ ಚಾಲಕನ ತಪ್ಪಿನಿಂದ ಆಗಿದೆ ಎಂದು ದೂರು ನೀಡಲಾಗಿದೆ ಅಂದರೆ ನಿಜ. ಪೋಲೀಸರು ಸಲ್ಲಿಸಿದ ದೋಷಾರೋಪಣೆ ಪಟ್ಟಿಯಲ್ಲಿ ಲಾರಿ ಚಾಲಕನ್ನು ಆರೋಪಿಯನ್ನಾಗಿ ಮಾಡಿದ್ದಾರೆ ಅಂದರೆ ನಿಜ. ಲಾರಿ ಚಾಲಕ ಹಿಂಬದಿಯಿಂದ ಬಂದು ಟಾಟಾ ಏಸ್ ವಾಹನಕ್ಕೆ ಡಿಕ್ಕಿ ಪಡಿಸಿ ಅಪಘಾತ ಪಡಿಸಿದ್ದಾನೆ ಅಂದರೆ ನಿಜ. ಅಪಘಾತವಾದ ಸ್ಥ,ಳದಲ್ಲಿ ರಸ್ತೆ ನೇರವಾಗಿ ಇದೆ ಎಂದರೆ ಸರಿಯಲ್ಲ. ತಿರುವಿನಿಂದ ಕೂಡಿದೆ. ಪೋಲೀಸರು ತಯಾರಿಸಿದ ನಕ್ಷೆಯಲ್ಲಿ ರಸ್ತೆ ತಿರುವಿನಿಂದ ಕೂಡಿದ ಬಗ್ಗೆ ನಮೂದಿಸಿಲ್ಲ ಅಂದರೆ ಸರಿಯಲ್ಲ. ಟಾಟಾ ಏಸ್ ವಾಹನ ಚಾಲಕ ತನ್ನ ಬದಿಯಲ್ಲಿ ನಿದಾನವಾಗಿ ವಾಹನ ಚಲಾಯಿಸುತ್ತಿದ್ದು ಹಿಂದಿನಿಂದ ಲಾರಿ ವಾಹನ ಚಾಲಕ ವೇಗವಾಗಿ ಬಂದು ಡಿಕ್ಕಿ ಪಡಿಸಿ ಅಪಘಾತ ಪಡಿಸಿದ್ದಾನೆ ಅಂದರೆ ನಿಜ. ನಾವು ಹೋಗುತ್ತಿದ್ದ ಟಾಟಾ ಏಸ್ ವಾಹನದ ಹಿಂಬದಿಯಲ್ಲಿ ಮೋಟರ ಸೈಕಲ ಸವಾರ ಬರುತ್ತಿದ್ದು ಲಾರಿ ಚಾಲಕ ಮೋಟರ ಸೈಕಲಗೆ ಡಿಕ್ಕಿ ಪಡಿಸಿ ನಂತರ ನಮ್ಮ ವಾಹನಕ್ಕೆ ಡಿಕ್ಕಿ ಪಡಿಸಿದ್ದಾನೆ ಅಂದರೆ ಸಾಕ್ಷಿ ಮೋಟರ ಸೈಕಲ ನನಗೆ ಕಾಣಿಸಿಲ್ಲ ಆದರೆ ಲಾರಿ ಡಿಕ್ಕಿ ಪಡಿಸಿರುತ್ತದೆ ಎನ್ನುತ್ತಾರೆ. ಮೋಟರ ಸೈಕಲ ವಾಹನ ಚಾಲಕ, ಮಾಲೀಕ ಹಾಗೂ ವಿಮೆದಾರರನ್ನು ಅರ್ಜಿಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ಅಪಘಾತ ಲಾರಿ ಚಾಲಕನ ತಪ್ಪಿನಿಂದ ಆಗಿರುತ್ತದೆ ಅಂದರೆ ನಿಜ.

ಟಾಟಾ ಏಸ್ ವಾಹನ ಚಾಲಕನಿಗೆ ಚಾಲನಾ ಪರವಾನಿಗೆ ಇರಲಿಲ್ಲ ಎನ್ನುವದು ನನಗೆ ಗೊತ್ತಿಲ್ಲ. ನಾವು ಟಾಟಾ ಏಸ್ ವಾಹನದಲ್ಲಿ ಅನಧಿಕೃತವಾಗಿ ಪ್ರಯಾಣಿಸುತ್ತಿದ್ದೆ ಅಂದರೆ ಸರಿಯಲ್ಲ. ವಿಮಾ ಪಾಲಸಿ ಪ್ರಕಾರ ಟಾಟಾ ಏಸ್ ವಾಹನದ ಚಾಲಕ ಮತ್ತು ನಿರ್ವಾಹಕ ಇಬ್ಬರಿಗೆ ಮಾತ್ರಿ ಕುಳಿತುಕೊಳ್ಳಲು ಅವಕಾಶ ಇರುತ್ತದೆ ಆದ್ದರಿಂದ 3 ನೇ ಎದುರುದಾರ ನಮಗೆ ಅಪಘಾತದ ಪರಿಹಾರಧನ ಕೊಡಲು ಬಾಧ್ಯಸ್ಥರಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**